39

ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\1025\2016\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 22/02/2018
26

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

ವಿಷಯ: ಸರ್ಕಾರಿ ನೌಕರರಾದ ಕೋಲಾರ ಜಿಲ್ಲೆ 1) ತಾಲ್ಲೂಕ್ ಕಛೇರಿಯ ಭೂಮಾಪಕರಾದ ಶ್ರೀ.ತಿಮ್ಮರಾಜು ಮತ್ತು 2) ವಿಷಯ ನಿರ್ವಾಹಕರಾದ ಶ್ರೀ.ಬಾಲಕೃಷ್ಣ ರವರು ಕರ್ತವ್ಯ ಲೋಪ ಎಸಗಿರುವ ಬಗ್ಗೆ.

**********

ಕೋಲಾರ ಜಿಲ್ಲೆ ಮತ್ತು ತಾಲ್ಲೂಕ್ ಮೇಮಗಲ್ ಹೋಬಳಿ ಎ-ಬ್ಲಾಕ್ ಮನೆ ನಂ.809ರ ನಿವಾಸಿಯಾದ ಶ್ರೀ.ಸಿ.ಮಂಜುನಾಥ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ 1) ತಾಲ್ಲೂಕ್ ಕಛೇರಿಯ ಭೂಮಾಪಕರಾದ ಶ್ರೀ.ತಿಮ್ಮರಾಜು ಮತ್ತು 2) ವಿಷಯ ನಿರ್ವಾಹಕರಾದ ಶ್ರೀ.ಬಾಲಕೃಷ್ಣ (ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ತಾಲ್ಲೂಕ್ ವೇಮಗಲ್ ಹೋಬಳಿ ನಂದಿಕಾಮನಹಳ್ಳಿ ಗ್ರಾಮದ ಸರ್ವೆ ನಂ.18/2ಎ ವಿಸ್ತೀರ್ಣ 0.5.8 ಗುಂಟೆ ಜಮೀನನ್ನು ಶುದ್ಧ ಕ್ರಯ ಮಾಡಿಕೊಂಡಿದ್ದು, ಸದರಿ ಸರ್ವೆ ನಂಬರನ್ನು ತನಗೆ ಪೋಡಿ ಮಾಡಿಕೊಡಲು ದಿನಾಂಕ:27/01/14ರಂದು ಅರ್ಜಿ ಸಲ್ಲಿಸಿ, ₹1,500/-ಗಳನ್ನು ಕಟ್ಟಿದ್ದು, ಎದುರುದಾರರ ಕಛೇರಿಗೆ ಹೋಗಿ ವಿಚಾರಿಸಲಾಗಿ, ತಮ್ಮ ಕಡತ ನಾಪತ್ತೆಯಾಗಿದೆಯೆಂದು ಹೇಳಿ ಪುನಃ ತಮ್ಮಿಂದ ದಾಖಲೆಗಳನ್ನು ಪಡೆದಿದ್ದಾರೆ. ದಿನಾಂಕ:30/03/2016ರಂದು ಸಹ ಕೇಳಲು ಹೋದಾಗ ಒಂದು ಅರ್ಜಿಯನ್ನು ಪಡೆದುಕೊಂಡು ತಿದ್ದುಪಡಿಗೆ ಕಳುಹಿಸುವುದಾಗಿ ಹೇಳಿದ್ದಾರೆ. ಆದರೆ, ತಾವು ಕೊಟ್ಟಿರುವ ಯಾವ ದಾಖಲೆಗಳು ಅವರ ಬಳಿಯಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ನಂದಿಕಾಮನಹಳ್ಳಿ ಗ್ರಾಮದ ಸರ್ವೆ ನಂ.18/2ಎ ರ ತತ್ಕಾಲ್ ಪೋಡಿ ಅಳತೆಗೆ ಬಂದ ಅರ್ಜಿ ಬಾಬ್ತು ಅಳತೆ ಕೆಲಸ ಪೂರೈಸಲು ಮೂಲ ದಾಖಲೆಗಳಾದ ಆಕಾರ್ ಬಂದ್ ವಿಸ್ತೀರ್ಣಕ್ಕೂ ಅರ್ಜಿದಾರರು ಅರ್ಜಿಯಲ್ಲಿ ಹೇಳಿದ ವಿಸ್ತೀರ್ಣಕ್ಕೂ ತಾಳೆ ಇಲ್ಲದಿದ್ದುದರಿಂದ ಸಾಧ್ಯವಾಗದೇ ನಿವೇದನೆಯನ್ನು ನೋಟೀಸಿನೊಂದಿಗೆ ಲಗತ್ತಿಟ್ಟು ಮುಂದಿನ ಕ್ರಮಕ್ಕಾಗಿ ಕಛೇರಿಗೆ ಸಲ್ಲಿಸಿದೆಯೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

1ನೇ ಎದುರುದಾರರ ಆಕ್ಷೇಪಣೆಯ ಭಾಗಶಃ ಅಂಶಗಳನ್ನು ಹೇಳಿ, ಕೆಲವು ದಾಖಲೆಗಳ ಅವಶ್ಯಕತೆಯಿದೆಯೆಂದು ದೂರುದಾರರಿಗೆ ಹೇಳಿದ್ದು, ಆದರೆ ಸದರಿಯವರು ದಾಖಲೆಗಳನ್ನು ಸಲ್ಲಿಸಿಲ್ಲ. ಆದ್ದರಿಂದ, ಕಡತವನ್ನು ಸರ್ವೆ ಶಾಖೆಗೆ ವರ್ಗಾಯಿಸಿದೆಯೆಂದು ಹೇಳಿದ್ದಾರೆ.

5. ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

6. ಕೋಲಾರ ತಾಲ್ಲೂಕ್ ತಹಶೀಲ್ದಾರ್‌ರವರ ವರದಿಯನ್ನು ಕೇಳಲಾಗಿ, ಸದರಿಯರವರು 1 ಮತ್ತು 2ನೇ ಎದುರುದಾರರು ಆಕ್ಷೇಪಣೆಯಲ್ಲಿ ಹೇಳಿದ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ದೂರುದಾರರು ಶ್ರೀ.ಎಸ್.ಸಿ.ನಂಜುಂಡಪ್ಪ ರವರಿಂದ ದಿ:03/02/12ರ ಕ್ರಯಪತ್ರದಡಿ ಕೋಲಾರ ತಾಲ್ಲೂಕ್ ವೇಮಗಲ್ ಹೋಬಳಿ ನಂದಿಕಾಮನಹಳ್ಳಿ ಗ್ರಾಮದ ಸರ್ವೆ ನಂ.18/2ಎ ವಿಸ್ತೀರ್ಣ 0.5.8 ಗುಂಟೆ ಜಮೀನನ್ನು ಖರೀದಿಸಿರುವುದು ಹಾಜರುಪಡಿಸಿದ ಕ್ರಯ ಪತ್ರದಲ್ಲಿ ಕಂಡು ಬಂದಿದೆ. ಕ್ರಯ ಪತ್ರದಂತೆ ದೂರುದಾರರ ಹೆಸರಿಗೆ ಮ್ಯುಟೇಷನ್ ಮತ್ತು ಪಹಣಿ ದಾಖಲಾಗಿದೆ. ದಿನಾಂಕ:27/01/14 ರಂದು ದೂರುದಾರರು ತತ್ಕಾಲ್ ಪೋಡಿಗಾಗಿ ಕೋಲಾರ ತಾಲ್ಲೂಕ್ ಕಛೇರಿಗೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿ ದಿ:12/05/14 ರಂದು ವೇಮಗಲ್ ನಾಡಾ ಕಛೇರಿಯಲ್ಲಿ ಸ್ವೀಕೃತವಾಗಿಲ್ಲವೆಂದು

ದಿ:18/06/14ರಂದು ಉಪ ತಹಶೀಲ್ದಾರ್, ನಾಡಾ ಕಛೇರಿ, ವೇಮಗಲ್ ರವರು ಹಿಂಬರಹವನ್ನು ನೀಡಿದ್ದಾರೆ;

2) ಸರ್ವೆ ನಂ.18/2ಎ ರಲ್ಲಿ ಆಕಾರ್‌ಬಂದ್ ನಂತೆ ವಿಸ್ತೀರ್ಣ 30 ಗುಂಟೆ (4 ಗುಂಟೆ ಖರಾಬು ಜಾತಾ 26 ಗುಂಟೆ) ಎಂದಿದ್ದು, ಪಹಣಿ ಕಾಲಂ 3ರಲ್ಲಿ ಸ್ವತ್ತಿನ ವಿಸ್ತೀರ್ಣ 30 ಗುಂಟೆ ಎಂದು ದಾಖಲಾಗಿದ್ದು, ಕಾಲಂ 9ರಲ್ಲಿ ಹೆಚ್ಚು ವಿಸ್ತೀರ್ಣ ದಾಖಲಾಗಿದ್ದರಿಂದ ಅಳತೆ ಕೆಲಸ ಪೂರೈಸಲಾಗದೇ ಅರ್ಜಿಯನ್ನು ಸರ್ವೆ ಶಾಖೆಗೆ ವರ್ಗಾಯಿಸಲಾಗಿದೆಯೆಂದು ಎದುರುದಾರರು ಮತ್ತು ತಹಶೀಲ್ದಾರ್‌ರು ಹೇಳಿದ್ದಾರೆ;

3) ಸರ್ವೆ ನಂ.18/2ಎ ರ ಸ್ವತ್ತಿನ ಆಕಾರ್ ಬಂದ್‌ನಲ್ಲಿ ವಿಸ್ತೀರ್ಣ 30 ಗುಂಟೆ ಎಂದು ದಾಖಲಾಗಿದ್ದು, ಖರಾಬು ಜಾತಾ 26 ಗುಂಟೆ ಎಂದಿದೆ. ಆದರೆ, ತತ್ಕಾಲ್ ಪೋಡಿಗೆ ಕಳುಹಿಸಿದ ನೋಟೀಸಿನಲ್ಲಿ ಸ್ವತ್ತಿನ ವಿಸ್ತೀರ್ಣ 30 ಗುಂಟೆ ಎಂದು ಹೇಳಲಾಗಿದೆ. ಪಹಣಿಯಲ್ಲಿ ಕಂಡು ಬರುವಂತೆ ಖರಾಬು ಜಾತಾ ಸ್ವತ್ತಿನ ವಿಸ್ತೀರ್ಣ 26 ಗುಂಟೆ ಆಗಿದೆ. ನೋಟೀಸಿನಲ್ಲಿ ಸ್ವತ್ತಿನ ವಿಸ್ತೀರ್ಣ 30 ಗುಂಟೆ ಎಂದು ತಪ್ಪಾಗಿ ನಮೂದಾಗಿದ್ದರೂ ದೂರುದಾರರು ಖರೀದಿ ಮಾಡಿದ ಸ್ವತ್ತಿನ ವಿಸ್ತೀರ್ಣ 5.8 ಗುಂಟೆ ಎಂದು ಸರಿಯಾಗಿ ದಾಖಲಾಗಿದೆ. ಸದರಿ ನೋಟೀಸನ್ನು ದೂರುದಾರರು ನೀಡಿಲ್ಲ. ಆದಕಾರಣ, ನೋಟೀಸಿನಲ್ಲಿ ನೀಡಿದ ಸ್ವತ್ತಿನ ವಿಸ್ತೀರ್ಣ ತಪ್ಪಾಗಿರುವುದಕ್ಕೂ ದೂರುದಾರರಿಗೂ ಯಾವುದೇ ಸಂಬಂಧವಿಲ್ಲ. ದಿನಾಂಕ:27/01/14 ರಂದು ದೂರುದಾರರು ಅರ್ಜಿಯನ್ನು ನೀಡಿದ್ದು, ದೂರುದಾರರಿಗೆ ಸಂಬಂಧಿಸಿದ ಸಬೂಬನ್ನು ಹೇಳಿಕೊಂಡು ಎದುರುದಾರರು ಈವರೆವಿಗೂ ದೂರುದಾರರಿಗೆ ತತ್ಕಾಲ್ ಪೋಡಿಯನ್ನು ಮಾಡಿಕೊಡದೇ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಎದುರುದಾರರು ನೀಡಿರುವ ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಅದಲ್ಲದೆ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 26/2/18

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)

ಉಪಲೋಕಾಯುಕ್ತ–2,

ಕರ್ನಾಟಕ ರಾಜ್ಯ.